ಸಾಗರ ಕ್ಷೇತ್ರದಲ್ಲಿ ರಕ್ಷಣಾ ಗೋಡೆಯ ದುರಸ್ತಿ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ಸಾಗರ ಪಟ್ಟಣದ ಕುಡಿಯುವ ನೀರಿನ ರಿಸರ್ವಾಯರ್‌ನ ವೇಸ್ಟ್ ಏನು ಇತ್ತು, ಆ ವೇಸ್ಟ್‌ನಿಂದ ಹೋಗತಕ್ಕ ಒಂದು ಡ್ರಾಪ್ ಚಾನೆಲ್ ಇದೆ. ಅದು ಕಳೆದ ಮಳೆಗಾಲದಲ್ಲಿ ಅದಕ್ಕೆ ಕಟ್ಟಿರತಕ್ಕ ರಕ್ಷಣಾತ್ಮಕ ಗೋಡೆ ಕುಸಿದು ಬಿದ್ದು ಇವತ್ತಿನವರೆಗೆ ದುರಸ್ತಿ ಆಗಿಲ್ಲ. ಮಳೆಗಾಲ ಬೇರೆ ಬರುತ್ತಿದೆ. ತಕ್ಷಣ ರಿಪೇರಿ ಮಾಡದೇ ಹೋದರೆ ಬಹಳ ದೊಡ್ಡ ಅನಾಹುತ ಆಗುತ್ತದೆ ಅದಕ್ಕಾಗಿ ನಮ್ಮ ಜಿಲ್ಲಾಧಿಕಾರಿಗಳು ಮತ್ತು ನಗರಾಭಿವೃದ್ಧಿ ಇಲಾಖೆಯವರು ನಮ್ಮ ಸೆಂಟ್ರಲ್ ರಿಲೀಫ್ ಫಂಡ್‌ನಿಂದ ಹಣ ಬಿಡುಗಡೆ ಮಾಡಬೇಕೆಂದು ಕಂದಾಯ ಇಲಾಖೆಗೆ ಕೇಳಿದ್ದಾರೆ. ದಯವಿಟ್ಟು ತತ್‌ಕ್ಷಣ ಕಂದಾಯ ಇಲಾಖೆಯವರು ಹಣವನ್ನು ಬಿಡುಗಡೆ ಮಾಡಿ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

12.50 ಪಿ.ಎಂ.

ಕೆರೆಗಳಲ್ಲಿನ ಹೂಳು ತೆಗೆದುಕೊಂಡು ಹೋಗುತ್ತಿರುವವರಿಗೆ ರಾಯಲ್ಟಿ ವಿಧಿಸುತ್ತಿರುವುದು.

ಶ್ರೀ ಹೆಚ್.ಬಿ. ದ್ಯಾವೀರಪ್ಪ (ಮಾಲೂರು) : ಮಾನ್ಯ ಅಧ್ಯಕ್ಷರೆ, ಇವೊತ್ತು ಸರ್ಕಾರ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಕೆರೆಗಳಲ್ಲಿ ಹೂಳೆತ್ತಿಸುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ಇಟ್ಟಿಗೆ ಹಾಗೂ ಹೆಂಚಿನ ಕಾರ್ಖಾನೆಗಳಿದ್ದು, ಇದರಲ್ಲಿ ಕೆಲವರು ಕೆರೆಗಳಲ್ಲಿ ಹೂಳೆತ್ತಿ ತಾವೇ ಅದನ್ನು ತೆಗೆದುಕೊಂಡು ಹೋಗುತ್ತಿರುವುದರಿಂದ ಇದಕ್ಕೆ ಸರ್ಕಾರದವರು ಟ್ಯಾಕ್ಸ್, ರಾಯಲ್ಟಿ ವಿಧಿಸುತ್ತಿರುವುದರಿಂದ ತೊಂದರೆಯಾಗುತ್ತಿದ್ದು ಇದನ್ನು ಮನ್ನಾ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಇದಕ್ಕೆ ಯಾರು ಉತ್ತರ ಹೇಳುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಕ್ಷಮಿಸಬೇಕು. ಯಾರೋ ಒಬ್ಬ ಸದಸ್ಯರು ವಿಷಯ ಪ್ರಸ್ತಾಪಿಸುತ್ತಾರೆ, ಅದನ್ನು ಕೇಳಬೇಕು ಮತ್ತು ಉತ್ತರಿಸಬೇಕೆಂಬ ಸೌಜನ್ಯ ಸರ್ಕಾರಕ್ಕಿಲ್ಲವೇ? ಇದು ಎರಡನೆಯ ಸಲ ತಾವು ಅವರಿಗೆ ಹೇಳುತ್ತಿರುವುದು. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡಿ ನ್ಯಾಚುರಲ್ ಕ್ಯಲಾಮಿಟಿ ಫಂಡ್‌ನಿಂದ ಕಛೇರಿಯನ್ನು ದುರಸ್ತಿ ಮಾಡಿಕೊಡುವ ಬಗ್ಗೆ ಯಾರು ಉತ್ತರ ಹೇಳುತ್ತಾರೆಂದು ಕೇಳಿದಾಗ ಕೊನೆಗೆ ಅವರು ಎದ್ದು ನಿಂತು ಉತ್ತರ ಹೇಳಿದರು. ಪ್ರತಿ ಸಾರಿಯೂ ಈ ರೀತಿ ಹೇಳಿಸಿಕೊಳ್ಳಬೇಕೇ? ಇದರ ಬಗ್ಗೆ ಗಂಭೀರತೆ ಇಲ್ಲವೆಂದರೆ ನಾವು ಸದನದಲ್ಲಿ ಏಕೆ ಸೇರಬೇಕು? ಅಲ್ಲದೆ, ಮೇಲಿಂದ ಮೇಲೆ ಎಲ್ಲರಿಗೂ ಉಪದೇಶ ಮಾಡುವುದು.